ವಿಚಾರ ಮಾಡದೆ ನಾವು ಕಾಂಪನ್ಸೇಷನ್ ಕೊಟ್ಟಿದ್ದೇವೆ. ಹಾಗೆಯೇ ಮೊನ್ನೆ ಬೆಳಗಾಂಗೆ ಹೋದಾಗ ಕೆಲವು ಜನ ಇದನ್ನು ಪ್ರಸ್ತಾಪ ಮಾಡಿದರು. ಈ ಪ್ರಕಾರದ ಬಾತಾವರಣವಿರುವಾಗ ಮೆಮನ್‌ಬ್ರದರ್ಸ್ ಹುಬ್ಬಳ್ಳಿಗೆ ಬರುತ್ತಾರೆ. ಲೈಸೆನ್ಸ್‌ನ್ನು ರಿನ್ಯೂ ಮಾಡಿಸಿಕೊಂಡು ಹೋಗುತ್ತಾರೆ. ಎರಡು ವರ್ಷಕ್ಕೊಮ್ಮೆ ಆದ್ದರಿಂದ ಇದರಲ್ಲಿ ಇವರ ಲಿಂಕ್ ಇರಬಹುದೋ ಏನೋ; ಅದರ ಬಗ್ಗೆ ಈ ದೃಷ್ಟಿಯಲ್ಲಿ ತಮ್ಮ ಇಂಟಲಿಜೆನ್ಸ್, ತಮ್ಮ ಸರ್ಕಾರ ವಿಚಾರ ಮಾಡಬೇಕಾಗುತ್ತದೆ ಹಾಗೆಯೇ ನಾವು ಈ ಸದನಕ್ಕೆ ನಾಡಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಂಡಿದೆ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ. ಏನು ಕ್ರಮ ತೆಗೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ಇಷ್ಟು ವಿವರಗಳನ್ನು ತಾವು ಹೇಳಬೇಕಾಗುತ್ತದೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ವಿಷಯ:- ನರಸಿಂಹರಾಜಪುರ ತಾಲ್ಲೂಕಿನಲ್ಲಿ ಬಾಂಬ್ ಸಿಡಿದು ಒಬ್ಬ ಹುಡುಗಿಯ ಸಾವು

ಶ್ರೀ ಯು.ಕೆ. ಶಾಮಣ್ಣ:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿಯೂ ಸಹ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಒಂದು ಹುಡುಗಿಗೆ ಬಾಂಬ್ ಸಿಡಿದು ಸ್ಥಳದಲ್ಲಿಯೇ ಮೃತಪಟ್ಟಿರುವಂಥ ವಿಚಾರ ನನ್ನ ಗಮನಕ್ಕೆ ಹಾಗೂ ಪತ್ರಿಕೆಗಳಲ್ಲಿ ಈಗಾಗಲೇ ಬಂದಿದೆ. ದಯವಿಟ್ಟು ಈ ಬಗ್ಗೆ ಮೃತಪಟ್ಟಿರುವಂಥ ಹುಡುಗಿಯ ಕುಟುಂಬಕ್ಕೆ ಸಹಾಯವನ್ನು ಸಹ ಸರ್ಕಾರದ ಮುಖಾಂತರ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ಹೆಚ್ಚಿನ ವಿಚಾರಣೆಯನ್ನು ಸಹ ಸಂಬಂಧಪಟ್ಟವರ ಮೂಲಕ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು, ಈಗ ಮೈಸೂರಿನಲ್ಲಿ ಏನು ಭೂಕಂಪದಂತಹ ಒಂದು ಶಬ್ದ ಬಂದಿತು, ಸ್ಫೋಟವಾಯಿತೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಅದು ಯಾವುದೆಂದು ಹೇಳಿ ಇನ್ನೂ ನಮಗೆ ವೈಜ್ಞಾನಿಕವಾದಂಥ ವರದಿ ಬಂದಿಲ್ಲ. ಆದರೆ ಕೆಲವು ವರದಿಯಂತೆ ಒಂದು ವಿಮಾನ ಹೋಯಿತು. ಈ ಸಂದರ್ಭದಲ್ಲಿ ಒಂದು ರೀತಿಯಾದ ಶಬ್ದ ಬಂದಿತು ಎಂದು ಹೇಳಿದ್ದಾರೆ. ಇದು ಬಾಂಬ್ ಬ್ಲಾಸ್ಟ್ ಅಲ್ಲ. ಆದರೂ ವರದಿ ಬಂದ ಕೂಡಲೇ ಸದನಕ್ಕೆ ತಿಳಿಸುತ್ತೇನೆ. ಇನ್ನು ನಮ್ಮ ಸನ್ಮಾನ್ಯ ಆರ್.ವಿ.ದೇಶಪಾಂಡೆಯವರು ಮತ್ತು ಯು.ಕೆ. ಶಾಮಣ್ಣನವರು ಹೇಳಿದಂಥದ್ದು ಅದು ನರಸಿಂಹರಾಜಪುರದಲ್ಲಿ ನಮಗೆ ಈಗ ಬಂದ ವರದಿ ಪ್ರಕಾರ ಒಂದು ಮಗು ಬರುತ್ತಿರುವಾಗ ಒಂದು ಸಣ್ಣ ಉಂಡೆ ಸಿಕ್ಕಿತಂತೆ. ಅದನ್ನು ಬಾಯಿಗೆ ಹಾಕಿಕೊಂಡುಬಿಟ್ಟಾಗ ಅದು ಎಕ್ಸ್‌ಪ್ಲೋಡ್ ಆಗಿ ಸ್ಥಳದಲ್ಲೇ ಮೃತಪಟ್ಟಿತು. ಅದನ್ನು ಕಾಡುಹಂದಿ ಕೊಲ್ಲಲಿಕ್ಕೆ ಉಪಯೋಗ ಮಾಡುತ್ತಾರೆ. ಅಂಥ ಬಾಂಬ್ ಎಂದು ನಮಗೆ ವರದಿ ಬಂದಿದೆ. ನಾವು ಮುಂದೆ ಇದರ ಬಗ್ಗೆ ವಿಷದವಾದಂಥ ತನಿಖೆ ಮಾಡಿಸುತ್ತೇವೆ. ಒಂದು ವಿಚಾರ ಬಾಂಬೆನಲ್ಲಿ ನಮಗೆ ಬಂದಿರುವ ವರದಿ ಪ್ರಕಾರ..... May be according to us, this is the report as on today. ಬೊಂಬಾಯಿಂದ ಏನು ಆ ಎಕ್ಸ್‌ಪ್ಲೋಸಿವ್ಸ್ ಇಲ್ಲಿ ಕರ್ನಾಟಕಕ್ಕೆ ಒಂದು ಟಾರ್‌ಗೆಟ್ಡ್ ಏರಿಯಾ ಎಂದು ಹೇಳಿ ಅದು ಬರುತ್ತಿದೆ ಎಂದು ಹೇಳುವಂಥದ್ದು ನಮಗೆ ಬಂದ ವರ್ತಮಾನದ ಪ್ರಕಾರ that has been prevented at the border itself. It has not come to Karnataka. ಕರ್ನಾಟಕದ ಒಂದು ಸರಹದ್ದಿನ ಒಳಗಡೆ ಯಾವುದೇ ಎಕ್ಸ್‌ಪ್ಲೋಸಿವ್ ಇದಕ್ಕೆ ಸಂಬಂಧಪಟ್ಟ ಹಾಗೆ ಬಂದಿಲ್ಲ ಇಲ್ಲಿಯವರೆಗೆ; ಆದರೂ ಕೂಡ ಎಲ್ಲಾ ರೀತಿಯ ಒಂದು ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. ಕಡಿಮೆ ಮಾಡುತ್ತಿಲ್ಲ. ಎಲ್ಲಾ ರೀತಿಯ ಸಿದ್ಧತೆಯನ್ನು ಎಲ್ಲಾ ಕಡೆಗೂ ಕೂಡ ಅದಕ್ಕೆ ಏನು ಬೇಕು ಎಕ್ವಿಪ್‌ಮೆಂಟ್ಸ್, ಮತ್ತೊಂದು ಇನ್ನೊಂದು ನಮ್ಮ ಗಡಿಯಲ್ಲಿ ಮತ್ತು ನಮ್ಮ ಸಮುದ್ರದ ಕಡೆ ಎಲ್ಲಾ ಕಡೆ ಕೂಡ ಹಿಂದೆ ಇದ್ದ ಹಾಗೆ ಮುಂಜಾಗರೂಕತೆಯಿಂದ ಹೋಗಿದ್ದೇವೆ. ಯಾವುದೇ ರೀತಿಯಿಂದ ದುಷ್ಕರ್ಮಿಗಳು ನಮ್ಮ ಕರ್ನಾಟಕದ ಒಳಗಡೆ ಪ್ರವೇಶ ಮಾಡಿ ಎಕ್ಸ್‌ಪ್ಲೋಸಿವ್ಸ್‌ನ್ನು,

ಬಾಂಬ್‌ಗಳನ್ನು ತರತಕ್ಕಂಥದ್ದನ್ನು ನಾವು ನಿಲ್ಲಿಸುತ್ತೇವೆ. ಆದರೆ ಮುಂದಕ್ಕೆ ಅಂತಹ ಭಯ ನಮ್ಮ ಜನತೆ ಪಡಬೇಕಾದಂಥ ಅವಶ್ಯಕತೆ ಇಲ್ಲ. ಇದು ಬಂದಿಲ್ಲ. According to the report which we have received, they came upto the Karwar border at Belgaum and when they found it is all tightened up, they have returned. This is the report we have received.

ಶ್ರೀ ವಾಟಾಳ್ ನಾಗರಾಜ್:- ವಿಧಾನಸೌಧಕ್ಕೆ ಫೋನ್ ಕರೆ ಬಂದಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ:- ರೂಮರ್ಸ್, ಫೋನ್ ಕಾಲ್ಸ್ ಎಲ್ಲಾ ಬರುತ್ತವೆ. ಆದರೆ ಕರ್ನಾಟಕದ ಗಡಿಯೊಳಗೆ ಬಂದಿಲ್ಲ. ಆದರೂ ನಾವು ಇದರ ಬಗ್ಗೆ ಕಾಂಪ್ಲಸೆಂಟ್ ಆಗುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು ಆ ಒಂದು ಅಪಾಯವನ್ನು ಎದುರಿಸುವುದಕ್ಕೆ ಬೇಕಾದ ಸಿದ್ಧತೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ತಮಗೆ ಗೊತ್ತಿರುವ ಹಾಗೆ ಬಳ್ಳಾರಿ ಬಗ್ಗೆ ವರದಿ ಬಂದಿದೆ. ಪಂಜಾಬಿನ ಉಗ್ರಗಾಮಿಗಳಿಗೆ ಆರ್ಮ್ ಅನ್ನು ಒದಗಿಸಿದಂಥ ಪರಿಸ್ಥಿತಿ ಬಗ್ಗೆ ತಾವು ನೆನಪು ಮಾಡಿಕೊಳ್ಳಬೇಕು. ಆದುದರಿಂದ ನಾವು ಇದರ ಬಗ್ಗೆ ಬಹಳ ಎಚ್ಚರಿಕೆಗೆ ವಹಿಸುತ್ತಿದ್ದೇವೆ. ಯಾವ ಮೂಲೆಯಲ್ಲಾಗಲಿ ಇಂಥ ಎಕ್ಸ್‌ಪ್ಲೋಸಿವ್ಸ್, ಆಕ್ರಮವಾಗಿ ಆಯುಧಗಳು ದಾಸ್ತಾನಿರುವ ಕಡೆ ನಾವು ಲಗ್ಗೆ ಹಾಕಿ ನಿಗಾ ಇಟ್ಟು ಎಲ್ಲಿದ್ದರೂ ಇದನ್ನು ಸಂಪೂರ್ಣವಾಗಿ ನಿಲ್ಲಿಸತಕ್ಕ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ:- ತಮಗೆ ಇನ್ನೂ ವರದಿ ಬಂದಿಲ್ಲ.....

Sri M. Veerappa Moily:- There was a report at that time. Even in Bellary...

ಶ್ರೀ ವಾಟಾಳ್ ನಾಗಾರಾಜ್:- ನಾನು ಲಾಕಪ್ ಸಾವುಗಳ ಬಗ್ಗೆ ಹೇಳಿದ್ದೆ.

ಶ್ರೀ ಆರ್. ವಿ. ದೇಶಪಾಂಡೆ:- ಚಿಕ್ಕಮಗಳೂರಿನಲ್ಲಿ ಬಾಂಬ್ ಬ್ಲಾಸ್ಟ್ ಆಗಿ ಅಥವಾ ಏನು ಎಂದು ಗೊತ್ತಿಲ್ಲ. ಮೈನಾ ಎಂಬ ಹುಡುಗಿ ಸತ್ತಿದ್ದಾಳೆ. ಅವಳ ಕುಟುಂಬದವರಿಗೆ ಪರಿಹಾರ ಕೊಡಬೇಕು.

Sri M. Veerappa Moily:- We will give Compensation.

ಶ್ರೀ ಬಸವಗೌಡ ಅಮರೇಗೌಡ:- ಸುಮಾರು 12 ದಿವಸಗಳ ಹಿಂದೆ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ಇಂಥದ್ದೇ ಬಾಂಬ್ ಬ್ಲಾಸ್ಟ್ ಆಗಿ ಜನರಿಗೆ ಗಾಯವಾಗಿದೆ. ಯಾವ ರೀತಿ ಬಾಂಬ್ ಎಂದರೆ ಬಹಳ ಭಯಂಕರವಾದ, ಪವರ್‌ಫುಲ್ ಇರತಕ್ಕ ಬಾಂಬ್ ಬ್ಲಾಸ್ಟ್ ಆಯಿತು. ಆ ಬಗ್ಗೆ ನಾನು ಜೆಳಿಗ್ಗೆ ಮುಖ್ಯ ಮಂತ್ರಿಗಳನ್ನು ಕಂಡು ಪತ್ರದ ಪ್ರತಿಯನ್ನು ಕೂಡ ಕೊಟ್ಟಿದ್ದೇನೆ.

ನಕ್ಸಲೈಟ್ಸ್ ಒಂದು ಪತ್ರ ಬರೆದು 25 ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ಅದಾದನಂತರ ಅಲ್ಲೇ ಒಂದು ಸಣ್ಣ ಹಳ್ಳಿ, ಮಲ್ಲದಗುಡ್ಡ ಎಂಬ ಗ್ರಾಮದಲ್ಲಿ ಸೂದಪ್ಪ ಎಂಬ ವ್ಯಕ್ತಿಗೆ ಬಾಕ್ಸ್‌ನಲ್ಲಿಟ್ಟು ಕಳುಹಿಸಿ, ಬಾಂಬ್ ರೀತಿಯ ವಸ್ತುವನ್ನು ಇಟ್ಟು ಅದು ಬ್ಲಾಸ್ಟ್ ಆಗಿ 3 ಜನರಿಗೆ ತೀವ್ರವಾದ ಗಾಯವಾಗಿದೆ. ಒಬ್ಬರಿಗೆ ಕಣ್ಣು ಪೂರ್ತಿ ಹೋಗಿದೆ, ಒಬ್ಬರಿಗೆ ಕೈ ಕಟ್ ಆಗಿದೆ. ಇನ್ನೊಬ್ಬ ಹೆಣ್ಣು ಮಗಳಿಗೆ ವಿಪರೀತ ಗಾಯವಾಗಿದೆ. ಆದ ಕಾರಣ ಅದನ್ನು ಸಿಓಡಿ ತನಿಖೆ ಮಾಡಿಸಿ. ಸಮ್ಮಲ್ಲಿ ಈಗಾಗಲೇ ನಕ್ಸಲೈಟ್ಸ್ ಹಾವಳಿ ವಿಪರೀತವಾಗಿದೆ. ಸಿಂಧನೂರು ತಾಲ್ಲೂಕುಗಳಲ್ಲಿ ಲೆಟರ್ ಬರೆಯತಕ್ಕದ್ದು ಇತ್ಯಾದಿಯಾಗಿ ನಕ್ಸಲೈಟ್ಸ್ ಹಾವಳಿಯಾಗಿದೆ. ಇದರ ಬಗ್ಗೆ ಸಮಗ್ರವಾಗಿ ಸಿಓಡಿ ತನಿಖೆ ಮಾಡಿ ಕಂಡುಹಿಡಿಯಬೇಕು. ಇವತ್ತಿನವರೆಗೆ

ಯಾರು, ಎಲ್ಲಿಂದ ಬಂದಿದೆ, ಯಾವ ರೀತಿ ಬಂದಿದೆ ಎಂದು ಪೋಲೀಸರಿಗೆ ತಿಳಿದಿಲ್ಲ. ಆದ ಕಾರಣ ಸಿಓಡಿ ತನಿಖೆ ಮಾಡಿಸಿದರೆ ಒಳ್ಳೆಯದಾಗುತ್ತದೆ. ಗಾಯಳುಗಳಿಗೆ ಏನಾದರೂ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಇದರ ಬಗ್ಗೆ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಕೆ. ಶಾಮಣ್ಣ :- ಚಿಕ್ಕಮಗಳೂರಿನಲ್ಲಿ ಮೈನಾ ಎಂಬ ಹುಡುಗಿ ಮೃತಪಟ್ಟಿರುವುದರಿಂದ ದಯವಿಟ್ಟು ಸರ್ಕಾರದ ಪತಿಯಿಂದ ಪರಿಹಾರ ಕೊಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಆದಕ್ಕೆ ನಾನು ಪರಿಹಾರ ಕೊಡುತ್ತೇನೆ. ಮಾನ್ಯ ಬಸವನಗೌಡರು ಬೆಳಿಗ್ಗೆ ನನ್ನನ್ನು ಬೇಟಿಯಾಗಿದ್ದರು, ಆದರೆ ಹೇಳಲು ಮರೆತುಬಿಟ್ಟೆ. ಅವರು ಸ್ಪಷ್ಟವಾಗಿ ಘಟನೆ ನಡೆದ ಬಗ್ಗೆ ಹೇಳಿದ್ದಾರೆ. ಅವರು ನಕ್ಸಲೈಟ್ಸ್ ಇರಬಹುದೆಂದು ನಮಗೆ ಸಂಶಯ ಇದೆ ಎಂದು ಆ ಪತ್ರದಲ್ಲಿ ಪ್ರಕ್ತಪಡಿಸಿದ್ದಾರೆ. ನಾವು ಕರ್ನಾಟಕದಲ್ಲಿ ಈ ನಕ್ಸಲೈಟ್ಸ್ ಆಟವಾಡುವುದಕ್ಕೆ ಬಿಡುವುದಿಲ್ಲ. If they do it, they will be doing at the cost of their lives,

ಆದುದರಿಂದ ನಾವು ನಮ್ಮ ಎಲ್ಲಾ ಸರಹದ್ದುಗಳನ್ನು ಭದ್ರಗೊಳಿಸಿದ್ದೇವೆ. ನಕ್ಸಲೈಟ್ಸ್ ಒಳಗೆ ಬಂದರೂ they will have to surrender. If they do not surrender, we will treat them at appropriate terms.

ಆದುದರಿಂದ ಇಲ್ಲಿ ಅವರ ಆಟ ನಡೆಸುವುದಕ್ಕೆ ಬಿಡುವುದಿಲ್ಲ. ತಾವು ಏನು ಹೇಳಿದ್ದೀರಿ ಅದಕ್ಕೆ ಸೂಕ್ತ ತನಿಖೆ ಮಾಡುತ್ತೇವೆ. ಮತ್ತು ಯಾರು ಗಾಯ ಹೊಂದಿದ್ದಾರೆ, ಅವರಿಗೆ ಸೂಕ್ತ ಪರಿಹಾರ ಕೊಡುತ್ತೇವೆ. ವಾಟಾಳ್ ನಾಗರಾಜ್ ಅವರು ನಿನ್ನೆ ಎರಡು ವಿಚಾರಗಳನ್ನು ಹೇಳಿದರು. ಒಂದು ಮಹಾಲಕ್ಷ್ಮಿ ಪುರದಲ್ಲಿ ನಂಜುಂಡ ಎಂಬ ಒಬ್ಬರು ಲಾಕ್‌ಅಪ್ ಡೆತ್ ಆಗಿದ್ದು, ಮತ್ತೊಂದು ಕೆಂಗೇರಿ ಗೇಟ್‌ನಲ್ಲಿ ಶಿವಣ್ಣ ಎಂಬುವವರ ಲಾಕಪ್ ಡೆತ್ ಆಗಿದೆ ಎಂದು ನಿನ್ನೆ ಎರಡು ವಿಚಾರಗಳು ಸದನದಲ್ಲಿ ಬಂದಿವೆ. ಈಗ ಇದರ ಬಗ್ಗೆ ನಾವು ಈಗಾಗಲೇ ನಮ್ಮ ಸಾಮಾನ್ಯವಾಗಿ ನೀತಿ ಪ್ರಕಾರ ಯಾವುದೇ ಲಾಕ್ ಅಪ್ ಡೆತ್ ಆದರೂ ತಕ್ಷಣ ಸಿಓಡಿಗೆ ಒಪ್ಪಿಸುತ್ತೇನೆ. ಈ ಎರಡೂ ಕೇಸ್‌ಗಳನ್ನು ಸಿಓಡಿಗೆ ಒಪ್ಪಿಸಿದ್ದೇವೆ. ಅದರಲ್ಲಿ ಮುಖ್ಯವಾಗಿ ಮಹಾಲಕ್ಷ್ಮಿ ಪುರದ ವಿಚಾರ. ಆ ಘಟನೆ ಬಗ್ಗೆ ನಾನು ನಿನ್ನೆ ಮಾತು ಕೊಟ್ಟಿದ್ದೆ. ಇತರ ಬಗ್ಗೆ ಖುದ್ದಾಗಿ ವಿಚಾರ ಮಾಡುತ್ತೇನೆ ಎಂದು ಹೇಳಿದ್ದೆ. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಸಿ ನೋಡಿದ್ದೇನೆ. ಪೋಸ್ಟ್ ಮಾರ್ಟಮ್ ರಿಪೋರ್ಟ್, ಸಂಬಂಧಪಟ್ಟ ಮಹಜರ್, ಇನ್‌ಕ್ವೆಸ್ಟ್ ರಿಪೋರ್ಟ್ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಸೇರಿಸಿ ಪರಾಮರ್ಶಿಸಿ ನೋಡಿದೆ. ಎಲ್ಲಾದರೂ ಸ್ವಲ್ಪವಾದರೂ ಅಲ್ಲಿ ನಿಜವಾಗಿ ಪೋಲೀಸರ ಕಾರಣದಿಂದ ಏನಾದರೂ ಮರಣ ಆಗಿದ್ದರೆ, ಅಜಾಗರೂಕತೆಯಿಂದ ಆಗಿರಬಹುದು. ನಾನು ಹಾಕಿಕೊಳ್ಳುವಾಗ ನೋಡದೇ ಇರತಕ್ಕದ್ದೂ ಅಜಾಗರೂಕತೆಯೇ. ಅದೂ ಕೂಡ ಆಗಬಾರದು. ಇದರ ಬಗ್ಗೆ ಸರಿಯಾಗಿ ನೋಡಿದಾಗ ಎಲ್ಲೂ ಕೂಡ ಸರಿಯಾದ ಒಂದು ದಾಖಲೆಯ ಕುರುಹು ನನಗೆ ಇದರ ಬಗ್ಗೆ ಸಿಗಲಿಲ್ಲ. I have gone through the postmortem report. Injuries, wound certificate, Inquest report,

ನೋಡಿದ್ದೇನೆ ಇನ್‌ಕ್ವೆಸ್ಟ್ ರಿಪೋರ್ಟ್ ನೋಡಿದೆ. ಎಲ್ಲವನ್ನೂ ಪರಾಮರ್ಶಿಸಿ ನೋಡಿದೆ. ಒಬ್ಬ ಕಾನ್‌ಸ್ಟೇಬಲ್‌ನ್ನು ಸಸ್ಪೆಂಡ್ ಮಾಡಿದ್ದೇವೆ. ತಾವು ಬಹುಷಃ ಮಹಾಲಕ್ಷ್ಮಿ ಪುರ ಪೋಲೀಸ್ ಸ್ಟೇಷನ್ ನೋಡಿರುವುದಿಲ್ಲ, ಇದೆಲ್ಲಾ ಕೆಲವು ಪೋಲೀಸ್ ಸ್ಟೇಷನ್ ಮತ್ತು ಕಸ್ಟಡಿ, ಲಾಕಪ್ ಸರಿ ಇರಬೇಕಾಗುತ್ತದೆ. ಇದನ್ನು ವ್ಯಾಪಕವಾಗಿ ಮಾಡಬೇಕಾಗುತ್ತದೆ. ಮತ್ತೊಂದು ಕೋಣೆಯಲ್ಲಿ ಏನಾಗುತ್ತಿದೆ ಎಂದು ನೋಡುವುದಕ್ಕಾಗುವುದಿಲ್ಲ. ಅವರು ಹೊರಗಡೆ ಕುಳಿತಿರುತ್ತಾರೆ. ಅ ಒಂದು ಕೋಣೆ ಇದೆ. ಎಸ್‌ಐ

ಒಂದು ಕಡೆ. ಒಬ್ಬೊಬ್ಬರು ಬೇರೆ ಬೇರೆ ಕಡೆ ಇದ್ದಾರೆ. ಈ ರೀತಿ ಇದ್ದರೆ ಸರಿಯಾಗಿ ಯಾರೂ ನಿಗಾವಹಿಸುವುದಿಲ್ಲ. ಆದರೂ ಕೂಡ ಸಮಯೋಚಿತವಾಗಿ ತನಿಖೆ ಮಾಡಬೇಕಾಗುತ್ತದೆ. ಸಿಓಡಿಯವರು ಒಂದು ವಾರದಲ್ಲಿ ತನಿಖೆ ಮಾಡಿ ಪ್ರಾಸ್ತಾವಿಕ ವರದಿ ಕೊಟ್ಟರೆ 8ನೇ ತಾರೀಖಿನ ಒಳಗೆ ನಾನು ಈ ಸದನದ ಮುಂದೆ ಇಡುತ್ತೇನೆ. ಬರೀ ಊಹೆ ಮೇಲೆ, ಯಾವುದೇ ಒಂದು ದಾಖಲೆ ಸಿಗದೇ ಸ್ಟೇಷನ್ ಹೌಸ್ ಆಫೀಸರ್ ಸಸ್ಪೆಂಡ್ ಇಷ್ಟತಕ್ಕ ಕೆಲಸ ಮಾಡಿದರೆ ಜವಾಬ್ದಾರಿಯಿಂದ ಕೆಲಸ ಮಾಡಿದಂತಾಗುವುದಿಲ್ಲ. ಈ ಎರಡೂ ವಿಚಾರಗಳ ಬಗ್ಗೆ ಸಿಓಡಿ ವರದಿಯನ್ನು ತರಿಸಿ 8ನೇ ತಾರೀಖಿನ ಒಳಗೆ ಇಡುತ್ತೇನೆ.

ವಿದ್ಯುತ್ ಬಳಕೆದಾರರಿಂದ 3 ತಿಂಗಳ ಡಿಪಾಸಿಟ್ ತೆಗೆದುಕೊಳ್ಳುವ ಬಗ್ಗೆ

ಶ್ರೀ ಪಿ. ಜಿ. ಆರ್ ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಈ ಒಂದು ವಿಚಾರ ಏನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇವತ್ತು ಯಾರು ವಿದ್ಯುತ್ ಉಪಯೋಗ ಮಾಡುತ್ತಿರತಕ್ಕ ಕನ್‌ಸೂಮರ್ಸ್ ಇದ್ದಾರೆ ಅವರು ಮುಂದಿನ 3 ತಿಂಗಳು ಏನು ವಿದ್ಯುತ್ ಉಪಯೋಗ ಮಾಡುತ್ತಾರೆ ಅದಕ್ಕೆ ಮುಂಚಿತವಾಗಿ ಹಣ ಡಿಪಾಸಿಟ್ ಮಾಡಬೇಕೆಂದು ಅದನ್ನು ಕಲೆಕ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ಯಾವ ರೀತಿ ವಿದ್ಯುತ್ ಫ್ಲಕ್ಚುಯೇಟ್ ಆಗುತ್ತಿದೆ. ವಿದ್ಯುತ್ ಕಟ್ ಆಗುತ್ತಿದೆ ಎನ್ನುವ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಇವತ್ತು ಷಾರ್ಟೇಜ್ ಬಂದಾಗ ಹಣ ಕಲೆಕ್ಟ್ ಮಾಡುವುದಕ್ಕೆ ಅವರಿಗೆ ರೈಟ್ಸ್ ಇದೆ. ಆದರೆ ಇವತ್ತು ಪರಿಸ್ಥಿತಿ ಏನಿದೆ ಎಂದು ನೋಡಬೇಕು. ಇವತ್ತು ಒಬ್ಬ ಗ್ರಾಹಕ 400 ರೂಪಾಯಿ ವಿದ್ಯುತ್ ತಿಂಗಳಿಗೆ ಬಳಸುತ್ತಿರುವವರು 1 ತಿಂಗಳಲ್ಲಿ ಒಂದೇ ಸಾರಿ ಆತ 1200 ರೂಪಾಯಿ ಕಟ್ಟಬೇಕೆಂದು ಹೇಳಿದರೆ ಹೇಗಾಗುತ್ತದೆ? ಇದು ಬಹಳ ಕಷ್ಟವಾಗುತ್ತದೆ. ಇವತ್ತು ಬೆಂಗಳೂರು ನಗರದ ವಿದ್ಯುತ್ ಗ್ರಾಹಕರು ನಮ್ಮೆಲ್ಲರನ್ನೂ ಭೇಟಿ ಮಾಡಿದ್ದಾರೆ. ಈ ಬಗ್ಗೆ ಪುನರ್‌ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ತಿಳಿಸಬೇಕೆಂದು ಬಹಳ ಜನರು ಒತ್ತಾಯ ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೂ ಬಂದಿದೆ ಎಂದು ನನ್ನ ಭಾವನೆ. ತಮಗೆ ಹಿಂದೆ ಹೇಳಿದಾಗ ಪುನರ್ ಪರಿಶೀಲನೆ ಮಾಡುತ್ತೇನೆನ್ನುವ ಅಭಿಪ್ರಾಯವನ್ನು ನೀವು ವ್ಯಕ್ತ ಮಾಡಿದ್ದೀರಿ. 1987-88ರಲ್ಲೂ ನಮ್ಮ ಸರ್ಕಾರ ಇದ್ದಾಗ ಕೆಇಬಿ ಅವರು ಅಲ್ಲಿನ ಅಧ್ಯಕ್ಷರಿಗೇ ಗೊತ್ತಿಲ್ಲದ ಹಾಗೆ ಹೆಚ್ಚು ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದರು ಆಗ ಇವರ ಬಗ್ಗೆ ಚರ್ಚೆ ಮಾಡಿ ನಿಲ್ಲಿಸಿದ್ದೇವೆ. ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಒಂದೇ ಸಾರಿ ಹೇಗೆ ಕೊಡುತ್ತಾರೆ? ಇವತ್ತು 3000 ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಒಬ್ಬ ಗ್ರಾಹಕ ತಿಂಗಳಿಗೆ ಸುಮಾರು 200 ರೂಪಾಯಿ ವಿದ್ಯುತ್ ಉಪಯೋಗ ಮಾಡುತ್ತಾನೆ. ಒಂದು ವಾರದಲ್ಲಿ ಆತ 600 ರೂಪಾಯಿ ಕೊಡುವುದಕ್ಕೆ ಆಗುತ್ತದೆಯೇ? ದಯವಿಟ್ಟು ಈ ಬಗ್ಗೆ ಯೋಚಿಸಿ ಇದನ್ನು ತಾವು ಸ್ಥಗಿತ ಮಾಡಿ ಪುನರ್ ಪರಿಶೀಲನೆ ಮಾಡಿ. ಸ್ವಲ್ಪ ಸಮಯ ಕೊಟ್ಟು ಹಣ ಇರುವವರ ಹತ್ತಿರ ಕೂಡಿ ಎಂದರೆ ಆಗುತ್ತದೆ. ಆದರೆ ಸಾಮಾನ್ಯ ಜನರಿಗೆ ಹರ್ಯಾಸ್‌ಮೆಂಟ್ ಏನು ಆಗುತ್ತಿದೆ. ಅದನ್ನು ತಪ್ಪಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್ ವಿ. ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೇ, ನಾನು ಮತ್ತು ಮಾನ್ಯ ಸಿಂಧ್ಯಾರವರು ಅಧ್ಯಕ್ಷರ ಅನುಮತಿಯನ್ನು ತಗೆದುಕೊಂಡಿದ್ದೇವೆ. ಮುಂಜಾನೆ ರೈಸ್ ಮಾಡಬೇಕಾಗಿತ್ತು. ಮುಖ್ಯ ಮಂತ್ರಿಗಳು ಇರಲಿಲ್ಲ. ಉಪ ಮುಖ್ಯಮಂತ್ರಿಗಳು ಸಹ ಇರಲಿಲ್ಲ. ಇದು ಬಹಳ ಗಂಭೀರವಾದ ಸಮಸ್ಯೆಯಿದೆ. ಕೆಇಬಿಯಲ್ಲಿ ಮನಾಪಲಿ ಇದೆ. ಕೆಇಬಿಯವರು ಏನು ಮಾಡಿದರೂ ಇವತ್ತು ನಾವು ಸಹಿಸಿಕೊಳ್ಳಬೇಕು. ನಾವಾಗಲೀ ನೀವಾಗಲಿ ಇದನ್ನು ಪಕ್ಷಾತೀತವಾಗಿ ವಿಚಾರ ಮಾಡಬೇಕು. ಕೆಇಬಿಯ ಸರ್ವೀಸ್ ಸರಿಯಿಲ್ಲ. ದಿನವೂ ಬೆಂಗಳೂರಿನಲ್ಲಿಯೇ ಐದಾರೂ ಸಲ ಲೈಟ್ ಹೋಗುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಶುರುವಾಗುತ್ತಿದೆ. ನನ್ನ ಮಗನು ಓದಿಕೊಳ್ಳಲಿಕ್ಕೆ ಮುಂಜಾನೆ 4.30 ಗಂಟೆಗೆ ಎಬ್ಬಿಸಿದೆ. 5.30 ಗಂಟೆಗೆ ಲೈಟ್ ಹೋಯಿತು. ಪುನಃ 6 ಗಂಟೆಗೆ ಬಂತು. ಮತ್ತೆ 6.30 ಗಂಟೆಗೆ ಹೋಯಿತು. ಈ ತರಹ ಪವರ್ ಕಟ್ ಪರಿಸ್ಥಿತಿ